2) ಯುವತಿ ಮಂಡಳಿಗಳು 1683

ಈ ಯುವಕ/ಯುವತಿ ಸಂಘಗಳ ಪೈಕಿ ಕೆಲವು ಸಂಘಗಳು ಮಾತ್ರ ಸ್ವಂತ ಕಟ್ಟಡಗಳನ್ನು ಹೊಂದಿವೆ.

ಅ. ಹೌದು.

ಶ್ರೀಮತಿ ಮೋಟಮ್ಮ:– ಅವರು ಉತ್ತರ ಒದಗಿಸಿದ್ದಾರೆಂದು ಹೇಳಿದ್ದಾರೆ ನಾನು ಕೇಳಿದ ಪ್ರಕಾರ ಉತ್ತರ ಬಂದಿಲ್ಲ. ಅವರು ನನ್ನ ಬಳಿ ಮಾತನಾಡುವಾಗ ಕೆಲವು ವಿಷಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆ ಸಂದರ್ಭದಲ್ಲಿ ಅವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಯುವಕ ಯುವತಿ ಮಂಡಳಿಗಳು ಎಷ್ಟು ಇವೆ ಅವುಗಳಿಗೆ ಹಣ ಒದಗಿಸಿಲ್ಲ ಎನ್ನುವುದನ್ನು ಅವರು ಒಪ್ಪಿಕೊಂಡಿದ್ದಾರೆ. ಹಾಗೆಯೇ ಕಟ್ಟಡ ಇಲ್ಲ ಎನ್ನುವುದನ್ನೂ ಒಪ್ಪಿಕೊಂಡಿದ್ದಾರೆ. ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳುವುದೇನೆಂದರೆ ನಾವು ಯುವಕ ಶಕ್ತಿಯನ್ನು ಸರಿಯಾಗಿ ಬಳಸಿಕೊಳ್ಳುತ್ತಿಲ್ಲ. ಯುವಕ ಶಕ್ತಿಯನ್ನು ಸರಿಯಾಗಿ ಬಳಸಿಕೊಳ್ಳಬೇಕಾದರೆ ಯುವಕ ಯುವತಿ ಮಂಡಳಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನಾವು ಆಕ್ಟಿವೇಟ್ ಮಾಡಬೇಕು ಇಲ್ಲದಿದ್ದರೆ ಅವರಿಗೆ ಯಾವುದೇ ಹಣಕಾಸಿನ ನೆರವು ಈ ಇಲಾಖೆಯಿಂದ ಸಿಗುತ್ತಿಲ್ಲ. ಜಿಲ್ಲಾ ಹಾಗೂ ತಾಲ್ಲೂಕುಗಳಿಗೆ 1500 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅದು ಏನೇನು ಸಾಲದು. ಈ ಯುವಕ ಯುವತಿ ಮಂಡಳಿಗಳಿಗೆ ಕಟ್ಟಡಗಳನ್ನು ಜಿಲ್ಲಾಪರಿಷತ್ ಮೂಲಕ ಕಟ್ಟಿಸಿಕೊಡುವ ನಿರ್ಣಯವನ್ನು ಹಾಕಿಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಈ ಯುವಕ ಯುವತಿ ಮಂಡಳಿಗಳನ್ನು ಆಕ್ಟಿವೇಟ್ ಮಾಡಲು ಅವರುಗಳಿಗೆ ಇಷ್ಟು ಎಂದು ಆರ್ಥಿಕ ನೆರವು ನೀಡಬೇಕು. ಅದಕ್ಕೆ ಸಹಾಯಧನ ಕೊಡಬೇಕು. ಮೂರನೆಯದಾಗಿ ಈ ಒಂದು ಯುವಕ ಯುವತಿ ಮಂಡಳಿಗಳಿಗೆ ಕೆಲವು ಕಾರ್ಯಕ್ರಮಗಳನ್ನು ರೂಪಿಸಿಕೊಡಬೇಕು.

ಅಧ್ಯಕ್ಷರೇ, ಬರೀ ಯುವಕ ಯುವತಿ ಮಂಡಳಿ ಸ್ಥಾಪನೆ ಮಾಡಿ ಅವರನ್ನು ಬೇಜವಾಬ್ದಾರಿಯಾಗಿ ಇಟ್ಟರೆ ಪ್ರಯೋಜನವಾಗುವುದಿಲ್ಲ. ಹಳ್ಳಿಗಳಲ್ಲಿ ಹಳ್ಳಿಯ ಜನತೆಯಲ್ಲಿ ಅವೇರ್‌ನೆಸ್ ಕ್ರಿಯೇಟ್ ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಪ್ರಮದಾನ ಶಿಬಿರ ಇರಬಹುದು ಅಥವಾ ಕೋಮು ಸೌಹಾರ್ದತೆ ಉಂಟು ಮಾಡುವ ಕಾರ್ಯಕ್ರಮಗಳನ್ನು ಇವರ ಇಲಾಖೆಯಿಂದ ಏಕೆ ಹಮ್ಮಿಕೊಳ್ಳಬಾರದು ಎನ್ನುವುದು ನನ್ನ ಪ್ರಶ್ನೆ.

ಶ್ರೀ ಹೆಚ್. ವಿಶ್ವನಾಥ್:– ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶದ ಯುವಕ ಯುವತಿ ಮಂಡಳಿಗಳಿಗೆ ಸುಮಾರು 15 ಸಾವಿರ ರೂಪಾಯಿಗಳನ್ನು ಸರ್ಕಾರದಿಂದ ಮಂಡಳಿಗಳನ್ನು ಕಟ್ಟಲಿಕ್ಕೆ ಮತ್ತು ಯುವಜನೋತ್ಸವ ಮಾಡಲಿಕ್ಕೂ ಹಣ ಕೊಡುತ್ತಿದ್ದೇವೆ. ಅದರೆ ಹಣವನ್ನು ನಗದು ರೂಪದಲ್ಲಿ ಇವತ್ತು ನಾವು ಕೊಡುತ್ತಿಲ್ಲ. ಈ ದಿಸೆಯಲ್ಲಿ ಮಾನ್ಯ ಸದಸ್ಯರ ಸಲಹೆ ಬಹಳ ಸಮರ್ಥವಾಗಿದೆ ಮತ್ತು ಗ್ರಾಮೀಣ ಪ್ರದೇಶದ ಯುವಕ ಯುವತಿಯರನ್ನು ಕ್ರಿಯಾಶೀಲರನ್ನಾಗಿ ಮಾಡುವ ದೃಷ್ಟಿಯಿಂದ ಮುಂದಿನ ವರ್ಷದಿಂದ ಒಂದು ಹೊಸ ಯೋಜನೆಯನ್ನು ತಯಾರು ಮಾಡಿ ಗ್ರಾಮಾಂತರದ ಯುವ ಪ್ರತಿಭೆಯನ್ನು ಸಮರ್ಥವಾಗಿ ಬಳಸುವುದಕ್ಕೆ ಸರ್ಕಾರ ಕಾರ್ಯಕ್ರಮ ರೂಪಿಸುತ್ತದೆ.

ಸಿಂಧನೂರು ಪಟ್ಟಣದ ಗ್ರಾಮಾಂತರ ಆರಕ್ಷಕ ಠಾಣೆ.

199 (739): ಶ್ರೀ ಬಿ. ಹಂಪನಗೌಡ (ಸಿಂಧನೂರು)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸಿಂದನೂರು ಸಬ್ಬಣದಲ್ಲಿ ಗ್ರಾಮಾಂತರ ಪೊಲೀಸ್ ಠಾಣೆ ಪ್ರಾರಂಭ ಮಾಡುವ ಉದ್ದೇಶ ಸರ್ಕಾರದ ಗಮನದಲ್ಲಿದೆಯೇ ?

ಆ. ಹಾಗಿದ್ದಲ್ಲಿ ಯಾವಾಗ ಪ್ರಾರಂಭ ಮಾಡಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ. ಹೌದು.

ಆ. ಆವಶ್ಯಕತೆ, ಅಗತ್ಯತೆ ಮತ್ತು ಸಂಪನ್ಮೂಲಗಳನ್ನು ಆಧರಿಸಿ ಠಾಣೆ ತೆಗೆಯುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

ಶ್ರೀ ಬಿ. ಹಂಪನಗೌಡ:- ಅಧ್ಯಕ್ಷರೇ ಉತ್ತರದಲ್ಲಿ, 'ಹೌದು' ಎಂದು ಕೊಟ್ಟಿದ್ದಾರೆ ಮತ್ತು ಎರಡನೆಯದು ಆಗ್ಯತೆ ಅಗತ್ಯತೆ ಮತ್ತು ಸಂಪನ್ಮೂಲಗಳನ್ನು ಆಧರಿಸಿ ಪೋಲೀಸ್ ಠಾಣೆ ತೆರೆಯುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು ಎಂದು ಕೊಟ್ಟಿದ್ದಾರೆ. ಈ ವರ್ಷ ಸರ್ಕಾರ ಸುಮಾರು 40 ಪೋಲೀಸ್ ಠಾಣೆಗಳನ್ನೂ ಮಂಜೂರು ಮಾಡಿದೆ. ನನ್ನ ಕ್ಷೇತ್ರವಲ್ಲಿ ಹಲವಾರು ದರೋಡೆ ಕಳ್ಳತನದ ಕೇಸುಗಳು ಸಮಾಜ ಘಾತಕ ಕೆಲಸಗಳು ಆಗುತ್ತಿವೆ. ಪೊಲೀಸ್ ಠಾಣೆ ಬಹಳ ಆವಶ್ಯಕತೆ ಇದೆ. ನಾನು ಆಗಲೇ ಸರ್ಕಾರದ ಮೇಲೆ ಎರಡು ವರ್ಷದಿಂದ ಒತ್ತಾಯ ತರುತ್ತಿದ್ದೇನೆ. ಪೊಲೀಸ್ ಠಾಣೆ ಆವಶ್ಯಕತೆ ಇದೆ. ನನ್ನ ಕ್ಷೇತ್ರದಲ್ಲಿ ಸೂದ ವರ್ಷ ಸುಮಾರು 50 ಲಕ್ಷಕ್ಕೂ ಹೆಚ್ಚು ಎಸ್‌ಬಿಎಂ ಬ್ಯಾಂಕಿನ ದರೋಡೆ, ಜವಳಗೇರಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಕೂಡ ದರೋಡೆಯಾಗಿ ಅಂತಹ ಪ್ರಕರಣಗಳು ಇನ್ನೂ ನಡೆಯುತ್ತಿವೆ ಆದ್ದರಿಂದ ಪೊಲೀಸ್ ಠಾಣೆ ಆವಶ್ಯಕತೆ ಇದೆ. ನಿರ್ದಿಷ್ಟವಾಗಿ ಯಾವಾಗ ಪೋಲೀಸ್ ಠಾಣೆ ಮಂಜೂರು ಮಾಡುತ್ತೀರ ಎನ್ನುವುದನ್ನು ತಿಳಿವರು ತಿಳಿಸಬೇಕು.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಮುಖ್ಯಮಂತ್ರಿಗಳ ಪರವಾಗಿ):- ಅಧ್ಯಕ್ಷರೇ, ಸದಸ್ಯರು ಹೇಳಿರುವ ಕಾರಣಗಳಿಗಾಗಿಯೇ ಅಲ್ಲಿ ಅಗತ್ಯ ಇದೆ ಎಂಬುದನ್ನು ಸರ್ಕಾರ ಒಪ್ಪಿಕೊಂಡಿದೆ ಮತ್ತು 93-94ನೇ ಸಾಲಿನಲ್ಲಿ, ಎಷ್ಟು ಹೊಸ ಪೊಲೀಸ್ ಠಾಣೆ ತೆರೆಯಬೇಕೆಂದು ಸರ್ಕಾರ ನಿರ್ಧಾರ ಮಾಡುವುದೋ ಆ ಸಂದರ್ಭದಲ್ಲಿ ಈ ಮೂರು ಗ್ರಾಮಗಳು ಸಿಂಧನೂರು, ಸುರುವನಾಳ್, ಬೆಳಗನೂರು ಸ್ಥಳಗಳಲ್ಲಿ, ಆದ್ಯತೆ ಮೇಲೆ ಸರ್ಕಾರ ಪೊಲೀಸ್ ಠಾಣೆಗಳನ್ನೂ ಮಂಜೂರು ಮಾಡುವುದನ್ನೂ ಪರಿಶೀಲನೆ ಮಾಡುತ್ತದೆ.

ಶ್ರೀ ಬಿ. ಹಂಪನಗೌಡ:- ಅಧ್ಯಕ್ಷರೇ ಈ ವರ್ಷದಲ್ಲಿ ಕೆಲವು ಜಿಲ್ಲೆಗಳಿಗೆ 3-4 ಪೊಲೀಸ್ ಠಾಣೆ ಮಾಡಿದ್ದಾರೆ. ಆದರೆ ನನಗೆ ಅವಶ್ಯಕತೆ ಇದೆ ಕೊಡಿ ಸ್ವಾಮಿ ಎಂದರೆ ಮುಂದೆ ಆದ್ಯತೆ ಮೇಲೆ ತೆಗೆದುಕೊಳ್ಳಲಾಗುವುದು ಎಂಬ ಸರ್ಕಾರದ ಉತ್ತರ ನೋಡಿದರೆ ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಬಿಟ್ಟು ಅವಶ್ಯಕತೆ ಇಲ್ಲದೆ ಕಡೆ ಪೊಲೀಸ್ ಠಾಣೆ ಕೊಟ್ಟಾರೇನೋ ಎನ್ನುವುದು ನನ್ನ ಅನಿಸಿಕ. ನನ್ನ ಕ್ಷೇತ್ರದಲ್ಲಿ ಕೂಡ ಮೊನ್ನೆ ಕೋಮುಗಲಭೆಯಾಗಿ ಹಲವಾರು ಘಟನೆಗಳು ಆಗಿದೆ. ಆವಶ್ಯಕತೆ ಜಾಸ್ತಿಯಿರುವುದರಿಂದ ನಾವು ಒತ್ತಾಯ ಮಾಡುತ್ತೇವೆ ಹೊರತಾಗಿ ಶಾಂತಿ ಪಾಲನೆಗಾಗಿ ಇದೇ ವರ್ಷ ಮಂಜೂರು ಮಾಡುವ ಭರವಸೆಯನ್ನು ಈಡೇರಿಸಬೇಕೆಂದು ನಾನು ಒತ್ತಾಯಪಡಿಸುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಆಸೆಯಿಂದ ತಾವು ಪ್ರಶ್ನೆ ಕೇಳಿದ್ದೀರಿ, ತಾವು ಹೇಳಿದ ಅಗತ್ಯತೆಯನ್ನು ಸರ್ಕಾರ ಕಂಡಿದೆ. ತಾವು ಹೇಳಿರುವ ಗ್ರಾಮದಲ್ಲಿ ಪೊಲೀಸ್ ಠಾಣೆ ಮಾಡಬೇಕೆಂಬುದನ್ನು ಅತ್ಯಂತ ಸಹಾನುಭೂತಿಯಿಂದ ಸರ್ಕಾರ ಪರಿಶೀಲನೆ ಮಾಡುತ್ತದೆ.